# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 585 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 20-02-2024 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ರಾಜ್ಯದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ದೀರ್ಘಾವಧಿ ಹಣದ ಅಗತ್ಯತೆಗಳನ್ನು ಪೂರೈಸಲು ನೆರವು ಒದಗಿಸಲಾಗುತ್ತಿದೆಯೇ; ಹಾಗಿದ್ದಲ್ಲಿ. ಕಳೆದ 3 ವರ್ಷಗಳಲ್ಲಿ ಎಷ್ಟು ಕೈಗಾರಿಕೆಗಳಿಗೆ ನೆರವು ಒದಗಿಸಲಾಗಿದೆ: (ಜಿಲ್ಲಾವಾರು ವಿವರ ನೀಡುವುದು). | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲ ಸೌಲಭ್ಯ ಒದಗಿಸುತ್ತಿರುತ್ತದೆ.<br><br>ಸಂಸ್ಥೆಯಿಂದ ಕಳೆದ ಮೂರು ವರ್ಷಗಳಲ್ಲಿ (2021, 2022 ಮತ್ತು 2023) ನೆರವು ನೀಡಿರುವ ಜಿಲ್ಲಾವಾರು ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| (ಆ) | ಈ ಸಂಸ್ಥೆಯ ಮೂಲಕ ಸಮಾಜದ ದುರ್ಬಲ ವರ್ಗಗಳ ಉದ್ಯಮಿಗಳಿಗೆ / ಮೊದಲ ಪೀಳಿಗೆ ಉದ್ಯಮಿಗಳಿಗೆ ಸಹಾಯ ಮಾಡಲು ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ: ಆದೇಶ ಸಹಿತ ಯೋಜನಾವಾರು ಸಂಪೂರ್ಣ ವಿವರ ನೀಡುವುದು. | ಸಂಸ್ಥೆಯ ಮೂಲಕ ದುರ್ಬಲ ವರ್ಗಗಳ ಉದ್ಯಮಿಗಳಿಗೆ/ಮೊದಲ ಪೀಳಿಗೆ ಉದ್ಯಮಿಗಳಿಗೆ ಸಹಾಯ ಮಾಡಲು ರಾಜ್ಯ ಸರ್ಕಾರ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ :<br><br>**01.ಎಲ್ಲಾ ವರ್ಗದ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br>ಈ ಯೋಜನೆಯು ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಹೊಸ ಉತ್ಪಾದನಾ ಘಟಕಗಳಿಗೆ ಹಾಗೂ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಘಟಕಗಳ ವಿಸ್ತರಣೆ, ಆಧುನೀಕರಣ, ವೈವಿಧ್ಯೀಕರಣ, ತಾಂತ್ರಿಕ ಉನ್ನತೀಕರಣಕ್ಕೆ ನೇರವಾಗಿ ಉತ್ಪಾದನೆಗೆ ತೊಡಗಿಸುವ ಕಟ್ಟಡ ಹಾಗೂ ಯಂತ್ರೋಪಕರಣಗಳ ಹೊಸ ಹೂಡಿಕೆಗೆ ಅನ್ವಯಿಸುತ್ತದೆ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಶೇ.6 ರಷ್ಟು ಬಡ್ಡಿ ಸಹಾಯಧನ ಲಭ್ಯವಿರುತ್ತದೆ. ಸಂಸ್ಥೆಯ ಸಾಮಾನ್ಯ ಬಡ್ಡಿದರದ ಹಾಗೂ ಶೇ.6ರ ಬಡ್ಡಿ ಸಹಾಯಧನದ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ಸರ್ಕಾರ ಕೈಗಾರಿಕೆ & ವಾಣಿಜ್ಯ ಇಲಾಖೆಯು ಭರಿಸುತ್ತದೆ. ಈ ಯೋಜನೆಯಡಿ ಕನಿಷ್ಟ ಸಾಲದ ಮೊತ್ತ ರೂ.5.00 ಲಕ್ಷ ರೂ.ಗಳು ಮತ್ತು ಗರಿಷ್ಠ ಸಾಲದ ಮೊತ್ತ ರೂ.500.00 ಲಕ್ಷರೂ.ಗಳು. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರು ಪಾವತಿಯಲ್ಲಿ ಸುಸ್ತಿದಾರಾಗಿರಬಾರದು ಹಾಗೂ ಸಾಲ ವಿತರಣೆಯಾದ ದಿನಾಂಕದಿಂದ 5 ವರ್ಷಗಳ |

| | | |
|---|---|---|
| | | ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ.<br><br>**02. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br>ಈ ಯೋಜನೆಯಡಿ ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ ಉದ್ದಿಮೆದಾರರಿಗೆ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಘಟಕಗಳಿಗೆ ಮತ್ತು ಸೇವಾ ಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಹಾಗೂ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಅವಧಿ ಸಾಲವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳು ಪಾವತಿಸಬೇಕಾದ ವಾರ್ಷಿಕ ನಿವ್ವಳ ಬಡ್ಡಿ ದರದ ಶೇ.4 ರಷ್ಟು. ಸಂಸ್ಥೆಯು ವಿಧಿಸುವ ಸಾಮಾನ್ಯ ಬಡ್ಡಿ ಹಾಗೂ ನಿವ್ವಳ ಬಡ್ಡಿ ದರದ ನಡುವಿನ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯ ಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಕನಿಷ್ಟ 10.00 ಲಕ್ಷ ರೂ.ಗಳಿಂದ ಗರಿಷ್ಟ 1000.00 ಲಕ್ಷ ರೂ.ಗಳ ವರೆಗೆ ಸಾಲದ ನೆರವು ದೊರೆಯುತ್ತದೆ. (ಅವಧಿ ಸಾಲ ಮತ್ತು ಗರಿಷ್ಟ 50.00 ಲಕ್ಷರೂ.ಗಳ ಒಂದೇ ಬಾರಿಯ ದುಡಿಮೆ ಬಂಡವಾಳ ಸೇರಿ). ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರು ಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಈ ಯೋಜನೆಯಡಿ 500.00 ಲಕ್ಷರೂ.ಗಳವರೆಗೆ 8 ವರ್ಷ ಹಾಗೂ 500.00 ಲಕ್ಷರೂ.ಗಳಿಂದ 1000.00 ಲಕ್ಷರೂ.ಗಳವರೆಗೆ 10 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ.<br><br>**03. ಮಹಿಳಾ ಉದ್ಯಮಿಗಳಿಗೆ ಬಡ್ಡಿ ಸಹಾಯಧನ ಯೋಜನೆ:**<br>ಸಂಸ್ಥೆಯು ಸೇವಾ ವಲಯದಲ್ಲಿನ ಹೊಸ ಉದ್ಯಮಗಳು ಮತ್ತು ಸೇವಾ ವಲಯದಲ್ಲಿ ಅಸ್ತಿತ್ವದಲ್ಲಿರುವ ಉದ್ಯಮಗಳಿಂದ ವಿಸ್ತರಣೆ, ವೈವಿಧ್ಯೀಕರಣ, ಆಧುನೀಕರಣ ಮತ್ತು ತಂತ್ರಜ್ಞಾನದ ಉನ್ನತೀಕರಣ ಇತ್ಯಾದಿಗಳ ಮೂಲಕಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳು / ಉಪಕರಣಗಳಲ್ಲಿನ ಎಲ್ಲಾ ಹೊಸ ಹೂಡಿಕೆಗಳಿಗಾಗಿ ಯೋಜನೆಯನ್ನು ವಿಸ್ತರಿಸಲಾಗಿದೆ. ಈ ಯೋಜನೆಯಡಿಯಲ್ಲಿ ಫಲಾನುಭವಿಗಳು ಪಾವತಿಸಬೇಕಾದ ವಾರ್ಷಿಕ ನಿವ್ವಳ ಬಡ್ಡಿದರ ಶೇ.4 ರಷ್ಟು. ಸಂಸ್ಥೆಯು ವಿಧಿಸುವ ಸಾಮಾನ್ಯ ಬಡ್ಡಿ ಹಾಗೂ ನಿವ್ವಳ ಬಡ್ಡಿ ದರದ ನಡುವಿನ ವ್ಯತ್ಯಾಸ ಮೊತ್ತವನ್ನು ಬಡ್ಡಿ ಸಹಾಯಧನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮರು ಪಾವತಿಸಲಾಗುತ್ತದೆ. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ |

| | | |
|---|---|---|
| | | ಮರು ಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಈ ಯೋಜನೆಯಡಿ ಕನಿಷ್ಟ 5.00 ಲಕ್ಷರೂ.ಗಳಿಂದ ಗರಿಷ್ಟ 500.೦೦ ಲಕ್ಷ ರೂ.ಗಳ ವರೆಗೆ ಸಾಲದ ನೆರವು ದೊರೆಯುತ್ತದೆ ಹಾಗೂ ಸಾಲ ವಿತರಣೆಯಾದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯ ಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ.<br><br>**04. ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br>ಈ ಯೋಜನೆಯು ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳ ವಿಸ್ತರಣೆ, ವೈವಿಧ್ಯೀಕರಣ, ಆಧುನೀಕರಣಕ್ಕೆ ಅನ್ವಯವಾಗುತ್ತದೆ. ಘಟಕವು ಸಂಪೂರ್ಣವಾಗಿ ಹಿಂದುಳಿದ ವರ್ಗದ ವರ್ಗ-1 ಮತ್ತು ಹಿಂದುಳಿದ ವರ್ಗದ 2(ಎ) ಉದ್ಯಮಿಗಳ ಮಾಲೀಕತ್ವದಲ್ಲಿರಬೇಕು. ಈ ಯೋಜನೆಯಡಿ ವಾರ್ಷಿಕ ಶೇ.6 ರಷ್ಟು ಬಡ್ಡಿ ಸಹಾಯಧನ ಲಭ್ಯವಿರುತ್ತದೆ. ಸಂಸ್ಥೆಯ ಸಾಮಾನ್ಯ ಬಡ್ಡಿದರದ ಹಾಗೂ ಶೇ.6ರ ಬಡ್ಡಿ ಸಹಾಯಧನ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ನಿಗಮದಿಂದ ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿ ಕನಿಷ್ಟ 5.00 ಲಕ್ಷರೂ.ಗಳಿಂದ ಗರಿಷ್ಠ 1000.00 ಲಕ್ಷರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ. (ಅವಧಿ ಸಾಲ ಮತ್ತು ಗರಿಷ್ಠ 50.00 ಲಕ್ಷ ರೂ.ಗಳ ಒಂದೇ ಬಾರಿಯ ದುಡಿಮೆ ಬಂಡವಾಳ ಸೇರಿ). ಈ ಯೋಜನೆಯಡಿ 500.00 ಲಕ್ಷರೂ.ಗಳವರೆಗೆ 8 ವರ್ಷ ಹಾಗೂ 500.00 ಲಕ್ಷರೂ.ಗಳಿಂದ 1000.00 ಲಕ್ಷರೂ.ಗಳವರೆಗೆ 10 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಸಂಸ್ಥೆಯಲ್ಲಿ ಈ ಯೋಜನೆಯು ಡಿಸೆಂಬರ್ 2023ರಲ್ಲಿ ಅನುಷ್ಠಾನಗೊಳಿಸಲಾಯಿತು.<br><br>**05.ಅಲ್ಪಸಂಖ್ಯಾತ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ:**<br>ಈ ಯೋಜನೆಯು ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣಉದ್ಯಮಗಳವಿಸ್ತರಣೆ, ವೈವಿಧ್ಯೀಕರಣ, ಆಧುನೀಕರಣ, ತಾಂತ್ರಿಕ ಉನ್ನತೀಕರಣಕ್ಕೆ ಅನ್ವಯವಾಗುತ್ತದೆ. ಘಟಕವು ಸಂಪೂರ್ಣವಾಗಿ ಅಲ್ಪಸಂಖ್ಯಾತ ಸಮುದಾಯದ ಉದ್ಯಮಿಗಳ ಮಾಲೀಕತ್ವದಲ್ಲಿರಬೇಕು. ಈ ಯೋಜನೆಯಡಿ |

| | | |
|---|---|---|
| | | ವಾರ್ಷಿಕ ಶೇ.6 ರಷ್ಟು ಬಡ್ಡಿ ಸಹಾಯಧನ ಲಭ್ಯವಿರುತ್ತದೆ ಸಂಸ್ಥೆಯ ಸಾಮಾನ್ಯ ಬಡ್ಡಿ ದರದ ಹಾಗೂ ಶೇ.6ರ ಬಡ್ಡಿಸಹಾಯಧನ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಮರುಪಾವತಿಸಲಾಗುತ್ತದೆ. ಈ ಯೋಜನೆಯಡಿ ಕನಿಷ್ಟ 5.00 ಲಕ್ಷರೂ.ಗಳಿಂದ ಗರಿಷ್ಟ 1000.00 ಲಕ್ಷರೂ.ಗಳವರೆಗೆ ಸಾಲದ ನೆರವು ದೊರೆಯುತ್ತದೆ ಹಾಗೂ ಸಾಲ ವಿತರಣೆಯಾದ ದಿನಾಂಕದಿಂದ 8 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಸಂಸ್ಥೆಯಲ್ಲಿ ಈ ಯೋಜನೆಯು ಡಿಸೆಂಬರ್ 2023ರಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಮೇಲೆ ತಿಳಿಸಿರುವ ಯೋಜನೆಗಳ ಆದೇಶಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಲಾಗಿದೆ. |
| (ಇ) | ಸಂಸ್ಥೆಯ ಯೋಜನೆಗಳು ಹಾಗೂ ಸವಲತ್ತುಗಳ ಬಗ್ಗೆ ಗ್ರಾಮೀಣ ಭಾಗದಲ್ಲಿ ಸರಿಯಾದ ಮಾಹಿತಿ ಇಲ್ಲದೇ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆದಾರರು ಸೌಲಭ್ಯಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:<br>ಬಂದಿದ್ದಲ್ಲಿ, ಈ ಹಣಕಾಸು ಸಂಸ್ಥೆಯಿಂದ ದೊರೆಯುವ ಸವಲತ್ತುಗಳ ಬಗ್ಗೆ ಪ್ರಚಾರ ಮಾಡಲು ಸರ್ಕಾರ ಕೈ ಗೊಂಡಿರುವ ಕ್ರಮಗಳೇನು? ( ವಿವರ ನೀಡುವುದು) | ಸಂಸ್ಥೆಯಲ್ಲಿ ಯೋಜನೆಗಳು ಹಾಗೂ ಸವಲತ್ತುಗಳ ಬಗ್ಗೆ ಗ್ರಾಮೀಣ ಭಾಗದಲ್ಲಿ ಸರಿಯಾದ ಮಾಹಿತಿ ಇಲ್ಲದೇ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆದಾರರು ಸೌಲಭ್ಯಗಳಿಂದ ವಂಚಿತರಾಗಿರುವುದರ ಬಗ್ಗೆ ಯಾವುದೇ ಪ್ರಕರಣಗಳು ಬಂದಿರುವುದಿಲ್ಲ.<br><br>ಸಂಸ್ಥೆಯಲ್ಲಿ ದೊರೆಯುವ ಸವಲತ್ತುಗಳ ಪ್ರಚಾರ ಮಾಡಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಂಸ್ಥೆಯ ಶಾಖಾ ಕಛೇರಿಗಳು ಸ್ಥಾಪಿತವಾಗಿದೆ. ಈ ಶಾಖಾ ಕಛೇರಿಗಳು ಗ್ರಾಮಾಂತರ ಜಿಲ್ಲೆಯ ಜನಸಾಮಾನ್ಯರಿಗೆ / ಗ್ರಾಹಕರಿಗೆ ಮಾಹಿತಿ ಮತ್ತು ಸಾಲ ನೀಡುವ ಮೂಲಕ ಸೇವೆ ಸಲ್ಲಿಸುತ್ತಿದೆ. ಪ್ರತಿಯೊಂದು ಶಾಖಾ ಕಛೇರಿಯಲ್ಲಿಯೂ ಉದ್ಯಮಿಗಳ ಹಾಗೂ ಗ್ರಾಹಕರ ಮಾರ್ಗದರ್ಶನಕ್ಕಾಗಿ ಅನುಭವವುಳ್ಳ ಅಧಿಕಾರಿಗಳು ಇದ್ದು ಶಾಖಾ ಕಛೇರಿಗೆ ಭೇಟಿ ನೀಡುವ ಉದ್ಯಮಿಗಳಿಗೆ ಹಾಗೂ ಗ್ರಾಹಕರಿಗೆ ಸಂಸ್ಥೆಯ ಸಾಲ ಯೋಜನೆಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡುತ್ತಾರೆ. ಸಂಸ್ಥೆಯ ಅಧಿಕಾರಿಗಳು ಜಿಲ್ಲೆಯಲ್ಲಿ ಇರುವ ಗ್ರಾಮೀಣ ಭಾಗಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಘಟಕಗಳಿಗೆ ಭೇಟಿ ನೀಡಿ ವಿವಿಧ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಿ ಸಾಲ ಸೌಲಭ್ಯಗಳನ್ನು ಪಡೆಯಲು ಅನುಕೂಲ / ಸೂಕ್ತ ಮಾರ್ಗ ದರ್ಶನ ನೀಡುತ್ತಾರೆ.<br><br>ಶಾಖಾ ಕಛೇರಿಗಳು ಸಂಬಂಧಪಟ್ಟ ಲೀಡ್ ಬ್ಯಾಂಕ್, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಖಾಸಗಿ ಸಂಘ ಸಂಸ್ಥೆಗಳೊಂದಿಗೆ ವಿವಿಧ ಕಾರ್ಯಾಗಾರಗಳು, ಸೆಮಿನಾರ್ ಹಾಗೂ ಸಮ್ಮೇಳನಗಳಲ್ಲಿ ಭಾಗವಹಿಸಿ |

| | | |
|---|---|---|
| | | ಸಂಸ್ಥೆಯು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಲಭ್ಯವಿರುವ ವಿವಿಧ ಯೋಜನೆಗಳ ಮಾಹಿತಿಯನ್ನು ನೀಡಲಾಗುತ್ತಿದೆ. ಇದಲ್ಲದೆ ಶಾಖಾ ಕಛೇರಿಗಳು ಉದ್ಯಮಿಗಳಿಗೆ / ಗ್ರಾಹಕರಿಗೆ ಕೈಗಾರಿಕೋದ್ಯಮದ ಬಗ್ಗೆ ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಜಿಲ್ಲೆಗಳಲ್ಲಿ , ತಾಲ್ಲೂಕು ಮಟ್ಟದಲ್ಲಿ ಪ್ರತ್ಯಕ್ಷವಾಗಿ ನಡೆಸಲಾಗುತ್ತದೆ.<br><br>ಸಂಸ್ಥೆಯು ರಾಜ್ಯದ ಪ್ರಮುಖ ಕನ್ನಡ ಮತ್ತು ಆಂಗ್ಲ ಭಾಷೆಗಳ ದಿನ ಪತ್ರಿಕೆಗಳಲ್ಲಿ ವಿವಿಧ ಯೋಜನೆಗಳ ಮಾಹಿತಿಯ ಜಾಹೀರಾತುಗಳನ್ನು ನೀಡುತ್ತಿದೆ.<br><br>ಸಂಸ್ಥೆಯ ವಿವಿಧ ಸಾಲ ಯೋಜನೆಗಳ ಸಂಪೂರ್ಣ ಮಾಹಿತಿಯು ಸಂಸ್ಥೆಯ ಜಾಲತಾಣ; ksfc.karnataka.gov. ನಲ್ಲಿ ಲಭ್ಯವಿದೆ. |

**ಸಿಐ 24 ಎಸ್‌ಎಸ್‌ಐ 2024**

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು

# ಅನುಬಂಧ-1

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ**

**ಕಳೆದ 3 ವರ್ಷಗಳಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೆರವು ನೀಡಿರುವ ಘಟಕಗಳ ಸಂಖ್ಯೆ**

| # | ಜಿಲ್ಲೆ | 2020-21 | | | 2021-22 | | | 2022-23 | | |
|---|---|---|---|---|---|---|---|---|---|---|
| | | ಸೂಕ್ಷ್ಮ | ಸಣ್ಣ | ಮಧ್ಯಮ | ಸೂಕ್ಷ್ಮ | ಸಣ್ಣ | ಮಧ್ಯಮ | ಸೂಕ್ಷ್ಮ | ಸಣ್ಣ | ಮಧ್ಯಮ |
| 1 | ಬೆಂಗಳೂರು ನಗರ | 1 | 36 | | 4 | 47 | 1 | 4 | 44 | |
| 2 | ಬೆಳಗಾವಿ | | 15 | | 3 | 12 | | | 27 | |
| 3 | ಬಳ್ಳಾರಿ | 1 | 5 | | 2 | 5 | | 1 | 5 | |
| 4 | ಬೀದರ್ | 10 | 20 | | 10 | 9 | | 12 | 20 | |
| 5 | ವಿಜಯಪುರ | | 20 | | | 17 | 1 | 6 | 24 | |
| 6 | ಚಿಕ್ಕಮಗಳೂರು | 4 | 7 | | 6 | 5 | | 4 | 8 | |
| 7 | ಚಿತ್ರದುರ್ಗ | 9 | 8 | | 3 | 7 | | 5 | 10 | 2 |
| 8 | ದಕ್ಷಿಣಕನ್ನಡ | 2 | 8 | 1 | | 4 | 2 | 1 | 14 | |
| 9 | ಧಾರವಾಡ | 3 | 19 | | 7 | 15 | | 20 | 12 | |
| 10 | ಕಲಬುರಗಿ | 4 | 15 | | 2 | 6 | | 9 | 23 | |
| 11 | ಹಾಸನ | 8 | 20 | | 7 | 13 | | 3 | 10 | |
| 12 | ಕೊಡಗು | 1 | 6 | | 2 | 6 | | 2 | 12 | |
| 13 | ಕೋಲಾರ | 1 | 19 | | 10 | 16 | | 16 | 22 | |
| 14 | ಮಂಡ್ಯ | 4 | 4 | 1 | 8 | 4 | | 2 | 14 | |
| 15 | ಮೈಸೂರು | 6 | 30 | | 15 | 17 | 1 | 21 | 34 | |
| 16 | ರಾಯಚೂರು | 2 | 5 | | 1 | 8 | | 3 | 14 | 1 |
| 17 | ಶಿವಮೊಗ್ಗ | 6 | 2 | | 5 | 14 | | 7 | 6 | |
| 18 | ತುಮಕೂರು | 8 | 13 | 1 | 17 | 18 | | 17 | 35 | |
| 19 | ಉತ್ತರಕನ್ನಡ | | 2 | | 1 | 3 | | 1 | 4 | |
| 20 | ಬೆಂಗಳೂರುಗ್ರಾಮಾಂತರ | 1 | 13 | 1 | 1 | 21 | | 25 | 23 | 1 |
| 21 | ಚಾಮರಾಜನಗರ | 10 | 1 | | 4 | 6 | | 3 | 20 | |
| 22 | ದಾವಣಗೆರೆ | 9 | 3 | | 6 | 11 | 1 | 8 | 10 | 1 |
| 23 | ಬಾಗಲಕೋಟೆ | 1 | 12 | | 1 | 11 | | | 14 | |
| 24 | ಗದಗ | 1 | 5 | | 1 | 4 | | 5 | 9 | |
| 25 | ಹಾವೇರಿ | 5 | 3 | | 3 | 5 | 1 | 8 | 7 | 1 |
| 26 | ಉಡುಪಿ | 3 | 3 | | 2 | 6 | | 3 | 10 | 1 |
| 27 | ಕೊಪ್ಪಳ | | 9 | | 1 | 9 | | 5 | 12 | |
| 28 | ರಾಮನಗರ | 1 | 10 | | 4 | 6 | | 1 | 26 | |
| 29 | ಚಿಕ್ಕಬಳ್ಳಾಪುರ | 1 | 3 | | 2 | 8 | | 3 | 13 | |
| 30 | ಯಾದಗಿರಿ | | 5 | 1 | | 2 | | 2 | 3 | |
| 31 | **ಒಟ್ಟು** | **102** | **321** | **5** | **128** | **315** | **7** | **197** | **485** | **7** |

ಅನುಬಂಧ-2

ಎಲ್ಲಾ ವರ್ಗದ ಉದ್ದಿಮೆದಾರರಿಗೆ
ಬಡ್ಡಿ ಸಹಾಯಧನ ಯೋಜನೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ) ಮೂಲಕ ಜಾರಿಗೊಳಿಸಲಾಗುತ್ತಿರುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ನೀಡಲಾಗುತ್ತಿರುವ ಬಡ್ಡಿ ಸಹಾಯಧನವನ್ನು ಶೇ.10 ರಿಂದ ಶೇ.6 ಕ್ಕೆ ಪರಿಷ್ಕೃತಗೊಳಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಸಿಐ 20 ಎಸ್ ಎಸ್ ಐ 2018 ದಿನಾಂಕ 26.09.2018.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ರವರ ಪತ್ರ ಸಂಖ್ಯೆ: ಕ.ರಾ.ಹ.ಸಂ/ಪ್ರ.ಕ/MD/202/2020-21.
3. ನಿರ್ದೇಶಕರು (ಎಂ.ಎಸ್.ಎಂ.ಇ),ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ: ಕೈವಾಇ/ಎಂ.ಎಸ್.ಎಂ.ಇ/ಕೈವಿಅ/1/2020-21, ದಿನಾಂಕ: 12.05.2019.
4. ಸರ್ಕಾರದ ಅಧೀನ ಕಾರ್ಯದರ್ಶಿ(ವೆಚ್ಚ-1 ಮತ್ತು ಬಂ.ಹೂ) ರವರ ಟಿಪ್ಪಣಿ ಸಂಖ್ಯೆ: FD 77 Exp-1/2020, ದಿನಾಂಕ: 11.06.2020 ಹಾಗೂ FD 103 Exp-1/2020, ದಿನಾಂಕ:29.06.2020.
5. ಸಚಿವ ಸಂಪುಟದ ದಿನಾಂಕ 23.07.2020ರ ಕಾರ್ಯಸೂಚಿ ಕ್ರಮಸಂಖ್ಯೆ: 3 ಪ್ರಕರಣ ಸಂಖ್ಯೆ:ಸಿ:332/2020.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರದ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಯವರ 2018-19 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 357 ರಲ್ಲಿ ಘೋಷಿಸಿರುವಂತೆ, ಎಲ್ಲಾ ವಿಭಾಗದ ಉದ್ಯಮಶೀಲರು ಸ್ಥಾಪಿಸುವ ಉತ್ಪಾದನಾ ವಲಯದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ(ಎಂ.ಎಸ್.ಇ) ಘಟಕಗಳಿಗೆ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ ವಿಸ್ತರಣೆ/ಆಧುನೀಕರಣ/ವೈವಿಧ್ಯೀಕರಣ(Diversification)/ತಾಂತ್ರಿಕ ಉನ್ನತೀಕರಣ ಚಟುವಟಿಕೆಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಘಟಕಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಶೇ.10 ರಷ್ಟು ಸಹಾಯಧನವನ್ನು ನೀಡಲು ಮಾರ್ಗಸೂಚಿಗಳೊಂದಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರ ಪತ್ರದಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ರವರು ಎಲ್ಲಾ ವಿಭಾಗದ ಉದ್ಯಮಶೀಲರು ಪ್ರಾರಂಭಿಸುವ ಎಂ.ಎಸ್.ಎಂ.ಇ ಕೈಗಾರಿಕೆಗಳಿಗೆ ಕೆ.ಎಸ್.ಎಫ್.ಸಿ ಮೂಲಕ ಮಾರ್ಪಾಡುಗೊಳಿಸಿದ ಬಡ್ಡಿ ಸಹಾಯಧನ ಯೋಜನೆಗೆ 2020-21 ನೇ ಸಾಲಿನ ಆಯವ್ಯಯದಲ್ಲಿ ರೂ.45.00 ಕೋಟಿ ಮಾತ್ರ ಹಂಚಿಕೆ ಮಾಡಲಾಗಿದ್ದು, ಯೋಜನೆಯನ್ನು 2020 ರ ಜುಲೈ 31 ರವರೆಗೆ ಮುಂದುವರೆಸಲು ರೂ.10.00 ಕೋಟಿ ಹೆಚ್ಚುವರಿ ಅನುದಾನವನ್ನು ಒದಗಿಸಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3) ರ ಪತ್ರದಲ್ಲಿ, ನಿರ್ದೇಶಕರು (ಎಂ.ಎಸ್.ಎಂ.ಇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರವರು ಬ್ಯಾಂಕ್ ಗಳಿಂದ ಸಾಲ ಪಡೆದು ಹೊಸದಾಗಿ, ವಿಸ್ತರಣೆಯಡಿ, ಆಧುನೀಕರಣದಡಿಯಲ್ಲಿ, 2018-19, 2019-20 ನೇ ಸಾಲಿನಲ್ಲಿ ಕೈಗಾರಿಕೆ ಸ್ಥಾಪಿಸಿದ ಕೈಗಾರಿಕೋದ್ಯಮಿಗಳು

ಕೊರೋನಾ ಲಾಕ್ ಡೌನ್ ನಿಂದ ಉತ್ಪಾದನೆಯಿಲ್ಲದೇ ಬ್ಯಾಂಕ್ ಗಳಿಗೆ ಬಡ್ಡಿಕಟ್ಟಲಾಗದೆ, ನಷ್ಟವನ್ನು ಅನುಭವಿಸುತ್ತಿದ್ದು, 2019-20 ನೇ ಸಾಲಿನಲ್ಲಿ ವಿವಿಧ ಕೈಗಾರಿಕಾ ನೀತಿಗಳಡಿಯಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಮಂಜೂರಾದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಅವಶ್ಯವಿರುವುದಾಗಿ ಮತ್ತು ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡದೇ ಇದ್ದಲ್ಲಿ ಈ ಕೈಗಾರಿಕೆಗಳು ರೋಗಗ್ರಸ್ತವಾಗಿ ಶಾಶ್ವತವಾಗಿ ಮುಚ್ಚಿಹೋಗುತ್ತವೆ ಎಂದು ತಿಳಿಸುತ್ತಾ, ಕೊರೊನಾ ಪರಿಣಾಮದ ಹಿನ್ನೆಲೆಯಲ್ಲಿ ಮತ್ತು ಮೇಲೆ ತಿಳಿಸಿದ ಕಾರಣಗಳಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹೂಡುವ ಹೊಸ ಬಂಡವಾಳಕ್ಕೆ ಕೆ.ಎಸ್.ಎಫ್.ಸಿ ಮೂಲಕ ನೀಡಲಾಗುವ ಸಾಲಕ್ಕೆ ಶೇ 10% ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಅನುದಾನವನ್ನು ಕಡಿತಗೊಳಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (4) ರ ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-1 ಮತ್ತು ಬಂ.ಹೂ), ಆರ್ಥಿಕ ಇಲಾಖೆ ರವರ ಟಿಪ್ಪಣಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ) ಮೂಲಕ ಜಾರಿಗೊಳಿಸಲಾಗುತ್ತಿರುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ನೀಡಲಾಗುತ್ತಿರುವ ಬಡ್ಡಿ ಸಹಾಯಧನವನ್ನು ಶೇ.10 ರಿಂದ ಶೇ. 6 ಕ್ಕೆ ಪರಿಷ್ಕೃತಗೊಳಿಸಲು ಷರತ್ತುಸಹಿತ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (5) ರಲ್ಲಿ ದಿನಾಂಕ 23.07.2020ರ ಕಾರ್ಯಸೂಚಿ ಕ್ರಮಸಂಖ್ಯೆ: 3 ಪ್ರಕರಣ ಸಂಖ್ಯೆ:ಸಿ:332/2020ರಲ್ಲಿ ಆರ್ಥಿಕ ಇಲಾಖೆಯು ವಿಧಿಸಿರುವ ಷರತ್ತಿಗೊಳಪಟ್ಟು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಜಾರಿಗೊಳಿಸಲಾಗುತ್ತಿರುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ನೀಡಲಾಗುತ್ತಿರುವ ಬಡ್ಡಿ ಸಹಾಯಧನವನ್ನು ಶೇ.10 ರಿಂದ ಶೇ.6 ಕ್ಕೆ ಪರಿಷ್ಕೃತಗೊಳಿಸಿ ಸಚಿವ ಸಂಪುಟವು ಅನುಮೋದನೆ ನೀಡಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, 2018-19 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-357 ರ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ) ಮೂಲಕ ಜಾರಿಗೊಳಿಸಲಾಗುತ್ತಿರುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ನೀಡಲಾಗುತ್ತಿರುವ ಬಡ್ಡಿ ಸಹಾಯಧನವನ್ನು ಶೇ.10 ರಿಂದ ಶೇ.6 ಕ್ಕೆ ಪರಿಷ್ಕೃತಗೊಳಿಸಿ ಷರತ್ತಿಗೊಳಪಟ್ಟು 2020-21 ನೇ ಸಾಲಿನಿಂದ ಅನುಷ್ಠಾನಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ ಆದ್ದರಿಂದ ಈ ಆದೇಶ:

<u>ಸರ್ಕಾರಿ ಆದೇಶ ಸಂಖ್ಯೆ: ಸಿಐ 42 ಸಪ್ರಕೈ 2020, ಬೆಂಗಳೂರು, ದಿನಾಂಕ:16.09.2020.</u>

ಈ ಮೇಲಿನ ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ) ಮೂಲಕ ಜಾರಿಗೊಳಿಸಲಾಗುತ್ತಿರುವ ಸೂಕ್ಷ್ಮ ಮತ್ತ ಸಣ್ಣ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ಶೇ.10ರಷ್ಟು ಬಡ್ಡಿ ಸಹಾಯಧನವನ್ನು ನೀಡಲು ಹೊರಡಿಸಿದ್ದ ಸರ್ಕಾರದ ಆದೇಶ ಸಂಖ್ಯೆ ಸಿಐ 20 ಸಪ್ರಕೈ 2018 ದಿನಾಂಕ 26.09.2018ನ್ನು ಮಾರ್ಪಡಿಸಿ ಪ್ರಸ್ತುತ ಬಡ್ಡಿ ಸಹಾಯಧನವನ್ನು ಶೇ.10 ರಿಂದ ಶೇ.6 ಕ್ಕೆ ಪರಿಷ್ಕೃತಗೊಳಿಸಿ ಅನುಷ್ಠಾನಗೊಳಿಸಲು ಈ ಕೆಳಗಿನ ಷರತ್ತುಗಳಿಗೊಳಪಟ್ಟು, ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

1. ಈಗಾಗಲೇ ಹೊರಡಿಸಿದ ಸರ್ಕಾರದ ಆದೇಶ ಸಂಖ್ಯೆ ಸಿಐ 20 ಎಸ್ ಎಸ್ ಐ 2018 ದಿನಾಂಕ 26.9.2018 ರಲ್ಲಿರುವ ಮಾರ್ಗಸೂಚಿಯಲ್ಲಿ ಬಡ್ಡಿ ಸಹಾಯಧನವನ್ನು ಶೇ. 10 ರಿಂದ ಶೇ.6ಕ್ಕೆ ಪರಿಷ್ಕೃತಗೊಳಿಸಿ ಅನುಷ್ಠಾನಗೊಳಿಸತಕ್ಕದ್ದು. ಇತರ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

2. ಈಗಾಗಲೇ 2020-21ನೇ ಸಾಲಿನಲ್ಲಿ ಕೆ.ಎಸ್.ಎಫ್.ಸಿ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ಜುಲೈ-2020ರ ಅಂತ್ಯದವರೆಗೆ ಮಂಜೂರಾಗಿ, ಸಾಲದ ಮೊದಲ ಕಂತು ಬಿಡುಗಡೆ ಮಾಡಲಾಗಿರುವ ಸಾಲಗಳ ಮೇಲೆ ಶೇ.10 ರಷ್ಟು ಬಡ್ಡಿ ಸಹಾಯಧನವನ್ನು ನೀಡತಕ್ಕದ್ದು.

3. 2020-21ನೇ ಸಾಲಿನಲ್ಲಿ ಆಗಸ್ಟ್ 1ರ ನಂತರ ಕೆ.ಎಸ್.ಎಫ್.ಸಿ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ಮಂಜೂರಾದ / ಸಾಲದ ಮೊದಲ ಕಂತು ಬಿಡುಗಡೆ ಮಾಡಲಾಗುವ ಸಾಲಗಳ ಮೇಲೆ ಶೇ.6 ರಷ್ಟು ಬಡ್ಡಿ ಸಹಾಯಧನವನ್ನು ನೀಡತಕ್ಕದ್ದು.

4. 2020-21ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಲಾದ ರೂ.50.00 ಕೋಟಿ ಅನುದಾನವನ್ನು ಕೆ.ಎಸ್.ಎಫ್.ಸಿ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಉತ್ಪಾದನಾ ಉದ್ದಿಮೆಗಳು ಮತ್ತು ಉತ್ಪಾದನೆಗೆ ಪೂರಕವಾದ ಸೇವಾ ಚಟುವಟಿಕೆಗಳನ್ನು ಉತ್ತೇಜಿಸಲು ಜುಲೈ ಅಂತ್ಯದವರೆಗೆ ಮಂಜೂರಾಗಿ ಮೊದಲ ಕಂತು ಬಿಡುಗಡೆ ಮಾಡಲಾಗಿರುವ ಸಾಲಗಳು (10%) ಹಾಗೂ ಆಗಸ್ಟ್ 1 ರ ನಂತರ ಮಂಜೂರಾದ ಬಿಡುಗಡೆಯಾಗುವ ಸಾಲಗಳಿಗೆ (6%) ಹಾಗೂ ಬಾಕಿಯಿರುವ ಮೊದಲ ಪೀಳಿಗೆಯ ಉದ್ದಿಮೆದಾರರಿಗೆ ನೀಡಲಾಗಿರುವ ಸಾಲದ ಮೇಲಿನ ಬಡ್ಡಿ ಸಹಾಯಧನಗಳಿಗೆ ಸೇರಿ ಉಪಯೋಗಿಸತಕ್ಕದ್ದು.

5. ಸೂಕ್ತ ಆಯವ್ಯಯ ಹಂಚಿಕೆಯನ್ನು ಖಚಿತಪಡಿಸಿಕೊಳ್ಳದೇ ಈ ಯೋಜನೆಯಡಿ ಸರ್ಕಾರದ ಅನುಮೋದನೆ ಇಲ್ಲದೇ ಹೆಚ್ಚುವರಿ ಆರ್ಥಿಕ ಹೊರೆಯನ್ನು ಸೃಜಿಸಬಾರದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 77 Exp-1/2020, ದಿನಾಂಕ 11.06.2020 ಹಾಗೂ FD 103 Exp-1/2020,ದಿನಾಂಕ: 29.06.2020 ರಲ್ಲಿ ನೀಡಿರುವ ಷರತ್ತುಸಹಿತ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

RLatha

(ಆರ್. ಲತಾ)
ಪೀಠಾಧಿಕಾರಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ.&.ಎಸ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ & ಇ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ' ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
4. ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.

ಪರಿಶಿಷ್ಟ ಜಾತಿ / ಪಂಗಡಗಳ ಉದ್ಯಮದಾರರಿಗೆ
ಬಡ್ಡಿ ಸಹಾಯಧನ ಯೋಜನೆ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೆ.ಎಸ್.ಎಫ್.ಸಿ. ಸಂಸ್ಥೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಅನುಷ್ಠಾನ ಮಾಡುತ್ತಿರುವ ಶೇ. 4 ರಷ್ಟು ಬಡ್ಡಿ ಸಹಾಯ ಧನ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸಾಲದ ಗರಿಷ್ಠ ಮಿತಿಯನ್ನು ರೂ. 5.00 ಕೋಟಿಗಳಿಂದ ರೂ. 10.00 ಕೋಟಿಗಳಿಗೆ ಹೆಚ್ಚಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಸಕಇ 76 ಎಸ್‌ಎಲ್‌ಪಿ 2008, ದಿನಾಂಕ: 22.05.2010.

2) ಸರ್ಕಾರದ ಆದೇಶ ಸಂಖ್ಯೆ: ಸಕಇ 201 ಎಸ್‌ಎಲ್‌ಪಿ 2013, ದಿನಾಂಕ: 21.07.2015

3) ಸರ್ಕಾರದ ಆದೇಶ ಸಂಖ್ಯೆ ಸಕಇ 158 ಎಸ್‌ಎಲ್‌ಪಿ 2016 ದಿನಾಂಕ:18.06.2016.

ಪ್ರಸ್ತಾವನೆ:-

2016-17 ನೇ ಸಾಲಿನ ಆಯವ್ಯಯದಲ್ಲಿ ಕೆ.ಎಸ್.ಎಫ್.ಸಿ. ಸಂಸ್ಥೆ ವತಿಯಿಂದ ಹಾಲಿ ಅನುಷ್ಠಾನ ಮಾಡುತ್ತಿರುವ ಶೇ. 4 ರಷ್ಟು ಬಡ್ಡಿ ಸಹಾಯಧನ ಯೋಜನೆಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳು / ಅಪೆಕ್ಸ್ ಬ್ಯಾಂಕ್ ಮತ್ತು ಡಿಸಿಸಿ ಬ್ಯಾಂಕ್‌ಗಳಿಗೆ ವಿಸ್ತರಣೆ ಮಾಡಲಾಗುವುದು. ಈಗಿರುವ ರೂ.5.00 ಕೋಟಿಗಳ ಸಾಲದ ಮಿತಿಯನ್ನು ರೂ. 10.00 ಕೋಟಿಗಳಿಗೆ ಹೆಚ್ಚಿಸಲಾಗುವುದು. ಇದಕ್ಕಾಗಿ ರೂ. 40.00 ಕೋಟಿಗಳ ಅನುದಾನ ಒದಗಿಸಲಾಗುವುದು. ಇದರಿಂದ ಯೋಜನೆಯು ರಾಜ್ಯದ ಎಲ್ಲಾ ಭಾಗಕ್ಕೂ ತಲುಪಲಿದ್ದು, ಹೆಚ್ಚಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರಿಗೆ ಪ್ರಯೋಜನವಾಗಲಿದೆ ಎಂದು ಘೋಷಿಸಲಾಗಿದೆ.

ಸದರಿ ಘೋಷಣೆಯನ್ನು ಅನುಷ್ಠಾನಗೊಳಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗೆ/ಕಳುಹಿಸಲಾಗಿತ್ತು. ಸದರಿ ಇಲಾಖೆಗಳು ಅವರ ಸಹಮತಿಯನ್ನು ನೀಡಿರುತ್ತಾರೆ. ಅದರಂತೆ ಸದರಿ ಯೋಜನೆ ಈಗಾಗಲೇ ಕೆಎಸ್‌ಎಫ್‌ಸಿ ವತಿಯಿಂದ ಅನುಷ್ಠಾನಗೊಳಿಸ ಲಾಗುತ್ತಿರುವುದರಿಂದ ಸಾಲದ ಮಿತಿ ಹೆಚ್ಚಿಸುವ ಬಗ್ಗೆ ಕೆಎಸ್‌ಎಫ್‌ಸಿಗೆ ಸಂಬಂಧಿಸಿದಂತೆ ಸರ್ಕಾರ ಆದೇಶ ನೀಡಲು ತೀರ್ಮಾನಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳು / ಅಪೆಕ್ಸ್ ಬ್ಯಾಂಕ್ ಮತ್ತು ಡಿಸಿಸಿ ಬ್ಯಾಂಕ್‌ಗಳಿಗೆ ವಿಸ್ತರಿಸುವ ಬಗ್ಗೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು. ಈ ಹಿನ್ನೆಲೆಯಲ್ಲಿ, ಕೆಎಸ್‌ಎಫ್‌ಸಿಗೆ ಸಂಬಂಧಪಟ್ಟಂತೆ ಈ ಕೆಳಗಿನಂತೆ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ದಿನಾಂಕ:18.06.2016ರಂದು ಹೊರಡಿಸಲಾದ ಆದೇಶವನ್ನು ಹಿಂಪಡೆಯಲಾಗಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 158 ಎಸ್‌ಎಲ್‌ಪಿ 2016, ಬೆಂಗಳೂರು, ದಿನಾಂಕ: 25/06/2016</u>**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕೆ.ಎಸ್.ಎಫ್.ಸಿ. ಸಂಸ್ಥೆಯ ವತಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಹಾಲಿ ಅನುಷ್ಠಾನ ಮಾಡುತ್ತಿರುವ ಶೇ 4 ರಷ್ಟು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಈಗಿರುವ ರೂ. 5.00 ಕೋಟಿಗಳ ಸಾಲದ ಮಿತಿಯನ್ನು ಗರಿಷ್ಠ ರೂ. 10.00 ಕೋಟಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಹೆಚ್ಚಿಸಲಾಗಿದೆ.

1) The maximum loan limit of Rs. 10.00 crores includes term loan and one time working capital based on the project proposal but working capital is restricted to maximum of Rs.50.00 lakhs. Repetition of working capital sanction is not allowed.

2) The repayment period is 8 years including moritorium in case of loan upto Rs. 5.00 crores and upto 10 years in case of loan above Rs.5.00 crores but below Rs.10.00 crores.

3) All the applicants must belong to SC/ST and produce the SC/ST Caste Certificates issued by the competent authority in Karnataka. The personal verification of Original Caste Certificate is required to be done. The Affidavit may be obtained from the applicants to the effect that they belong to SC/ST. In case of doubt, before releasing of loan the genuineness of Caste Certificate may be verified with the competent authority. In case of any complaint regarding Caste Certificate against loanees, the same may be referred to Social Welfare Department for further action (These are necessary to avoid false Caste Certificate cases).

4) The minimum loan amount is Rs. 20.00 lakhs under this scheme in case of KSFC also.

5) The other terms and conditions of the Government orders at reference (1) and (2) are applicable.

ಸದರಿ ಬಡ್ಡಿ ಸಹಾಯ ಧನಕ್ಕೆ ತಗಲುವ ವೆಚ್ಚವನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ ಲೆಕ್ಕ ಶೀರ್ಷಿಕೆ 2225-01-796-0-02 ರಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ಅನುದಾನದಿಂದ ಭರಿಸುವುದು. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರು ಪರಿಶಿಷ್ಟ ಪಂಗಡ ಉದ್ದಿಮೆದಾರರಿಗೆ ಲೆಕ್ಕ ಶೀರ್ಷಿಕೆ 2225-02-794-0-05 ರಡಿ ವಿವಿಧ-ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ಅನುದಾನದಿಂದ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 408 ವೆಚ್ಚ/3 2016 ದಿನಾಂಕ. 28.05.2016 ರಂತೆ ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ ಛಿಡಿ 64 ಏಎಂಎಂ 2016 ದಿನಾಂಕ: 27.05.2016 ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

25/6/16

(ಪಿ.ಎಸ್ ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ)
ಸಮಾಜ ಕಲ್ಯಾಣ ಇಲಾಖೆ.

ಗೆ:-

1. ಮಹಾಲೇಖಪಾಲರು (ಎ & ಇ ಲೆಕ್ಕ ಪರಿಶೋಧನೆ-1, 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಕೃಷಿ ಭವನ, ಹಡ್ಸನ್ ವೃತ್ತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ತಿಮ್ಮಯ್ಯ ರಸ್ತೆ, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು-03.

ಮಹಿಳಾ ಉದ್ಯಮಿದಾರರಿಗೆ ಬಡ್ಡಿ ಸಹಾಯಧನ ಯೋಜನೆ

ಕ.ರಾ.ಹ.ಸಂ
ವ್ಯ.ನಿ.ರ ಕಛೇರಿ
ಸಂಖ್ಯೆ : 602 ದಿ: 20/10/2023

WCDSEC-WDC/60/2023-WCD_SEC_E-WOMEN AND CHILD WELFARE SEC

438
20/10/23

please circulate to all concerned

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2023-24ನೇ ಸಾಲಿನ ಜುಲೈ ಮಾಹೆಯ ಆಯವ್ಯಯ ಭಾಷಣದ ಕಂಡಿಕೆ:132 ರಲ್ಲಿನ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1) 2023-24ನೇ ಸಾಲಿನ ದಿನಾಂಕ:07.07.2023 ರಂದು ಮಂಡಣೆಯಾದ ಆಯವ್ಯಯ ಘೋಷಣೆ ಕಂಡಿಕೆ: 132
2) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ ಇವರ ದಿನಾಂಕ:17.08.2023ರ ಪತ್ರ ಸಂಖ್ಯೆ: ಮಅನಿ / KSFC /ಬಸಯೋ/ 2023-24/129
3) ಸರ್ಕಾರದ ಆದೇಶ ಸಂಖ್ಯೆ:ಮಮಇ 64 ಮಅನಿ 2014, ದಿನಾಂಕ:10.12.2015
4) ಸರ್ಕಾರದ ಆದೇಶ ಸಂಖ್ಯೆ:ಮಮಇ 57 ಮಅನಿ 2021, ದಿನಾಂಕ:13.01.2022
5) 2023-24ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಸಂಬಂಧಿಸಿದಂತೆ Budget Advice, ದಿನಾಂಕ:05.08.2023

HoD (FM)

********

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆಯವ್ಯಯ ಘೋಷಣೆ ಕಂಡಿಕೆ:132ರಲ್ಲಿ ಮಹಿಳಾ ಉದ್ಯಮಿಗಳು, ಆತಿಥ್ಯ, ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿದ್ದಾರೆ. ಆದ್ದರಿಂದ ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಶೇ.4 ರ ಬಡ್ಡಿ ದರದಲ್ಲಿ ನೀಡಲಾಗುವ ಸಾಲದ ಮಿತಿಯನ್ನು ಎರಡು ಕೋಟಿ ರೂ.ಗಳಿಂದ ಐದು ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ, 2016-17ನೇ ಸಾಲಿನಿಂದ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮುಖಾಂತರ ಮೇಲೆ ಓದಲಾದ ಕ್ರಮಸಂಖ್ಯೆ (3) ದಿನಾಂಕ:10.12.2015ರ ಆದೇಶದನ್ವಯ, ಮಹಿಳಾ ಉದ್ಯಮಿಗಳಿಗೆ "ಬಡ್ಡಿ ಸಹಾಯಧನ ಯೋಜನೆ"ಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.50.00 ಲಕ್ಷಗಳವರೆಗೆ ಸಾಲ ಸೌಲಭ್ಯ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮಂಜೂರು ಮಾಡುವ ಸಾಲದ ಮೇಲೆ ವಿಧಿಸುವ ಬಡ್ಡಿಯಲ್ಲಿ ಶೇಕಡ 10 ರಷ್ಟು ಬಡ್ಡಿಯನ್ನು ಸಹಾಯಧನವಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಒದಗಿಸಲಾಗುತ್ತಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (4)ರ ಆದೇಶದಲ್ಲಿ 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:26ರಲ್ಲಿ ಘೋಷಿಸಲಾದಂತೆ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮುಖಾಂತರ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ಸಾಲ ಸೌಲಭ್ಯ ಮತ್ತು ಶೇಕಡ 10ರಷ್ಟು ದರದಲ್ಲಿ ಬಡ್ಡಿ ಸಹಾಯಧನವನ್ನು ಒದಗಿಸಲು ಅವಕಾಶ ನೀಡಿದ್ದು, ಅದರಂತೆ, ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆದ್ದರಿಂದ, 2023-24ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆ ಕಂಡಿಕೆ ಸಂಖ್ಯೆ:132ರಲ್ಲಿ "ಮಹಿಳಾ ಉದ್ಯಮಿಗಳು, ಆತಿಥ್ಯ ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿರುವುದರಿಂದ, ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಶೇ.4ರ ಬಡ್ಡಿ ದರದಲ್ಲಿ ನೀಡಲಾಗುವ ಸಾಲದ ಮಿತಿಯನ್ನು ರೂ.2.00 ಕೋಟಿಗಳಿಂದ ರೂ.5.00 ಕೋಟಿಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಣೆ ಮಾಡಲಾಗಿದ್ದು ಅದರಂತೆ, 2023-24ನೇ ಸಾಲಿನ ಆಯವ್ಯಯ ಅಂದಾಜು ಸಂಪುಟ-5ರಲ್ಲಿ ಸದರಿ ಯೋಜನೆಯ ಲೆಕ್ಕ ಶೀರ್ಷಿಕೆ:2232-02-001-0-10-106ರಲ್ಲಿ ರೂ.5200.00ಗಳ ಅನುದಾನ ನಿಗದಿಪಡಿಸಲಾಗಿರುವುದರಿಂದ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಬೇಕೆಂದು ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಮ.ಅ.ನಿಗಮ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (5)ರ ದಿನಾಂಕ:05.08.2023ರ Budget Advice ರಲ್ಲಿ ಆಯವ್ಯಯ ಭಾಷಣ ಕಂಡಿಕೆ:132 ರ ಘೋಷಣೆಗೆ ಸಂಬಂಧಿಸಿದಂತೆ, ಲೆಕ್ಕ ಶೀರ್ಷಿಕೆ:2235-02-001-0-10-106 (ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನ)ರಡಿ ರೂ.5200.00 ಲಕ್ಷಗಳನ್ನು ಒದಗಿಸಲಾಗಿದ್ದು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಮಮಇ 60 ಮಅನಿ 2023, ಬೆಂಗಳೂರು, ದಿನಾಂಕ:07.10.2023</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:132ಕ್ಕೆ ಸಂಬಂಧಿಸಿದಂತೆ, "ಮಹಿಳಾ ಉದ್ಯಮಿಗಳು, ಆತಿಥ್ಯ ಆರೈಕೆ ಮತ್ತು ಪ್ರವಾಸೋದ್ಯಮದಂತಹ ಸೇವಾ ವಲಯದಲ್ಲಿ ಹೆಚ್ಚಿನ ಅವಕಾಶ ಪಡೆಯುತ್ತಿರುವುದರಿಂದ ಸೇವಾ ವಲಯದಲ್ಲಿ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಶೇ.4ರ ಬಡ್ಡಿ ದರದಲ್ಲಿ ನೀಡಲಾಗುವ ಸಾಲದ ಮಿತಿಯನ್ನು ರೂ.2.00 ಕೋಟಿಗಳಿಂದ ರೂ.5.00 ಕೋಟಿಗಳಿಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಮತ್ತು ಸರ್ಕಾರದ ಆದೇಶ ಸಂಖ್ಯೆ:ಮಮಇ 57 ಮಅನಿ 2021, ದಿನಾಂಕ:13.01.2022ರ ಆದೇಶದ ಅನುಬಂಧದಲ್ಲಿನ ಮಾರ್ಗಸೂಚಿಗಳನುಸಾರ 2023-24ನೇ ಆರ್ಥಿಕ ಸಾಲಿನಿಂದ ಹೊಸದಾಗಿ ಆಯ್ಕೆಯಾಗುವ ಅರ್ಹ ಫಲಾನುಭವಿಗಳಿಗೆ ಅನ್ವಯವಾಗುವಂತೆ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿನೊಂದಿಗೆ ಕ್ರಮವಹಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

WCDSEC-WDC/60/2023-WCD_SEC_E-WOMEN AND CHILD WELFARE SEC

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 295 ವೆಚ್ಚ-10/2023, ದಿನಾಂಕ:29.08.2023ರನ್ವಯ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಪಿಡಿಎಸ್ 71 ಐಎಂಎಂ 2023, ದಿನಾಂಕ:27.09.2023ರಲ್ಲಿ ನೀಡಿರುವ ಸಹಮತಿ ಮತ್ತು ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

7/10/23

(ಆರ್.ಲತಾ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇ & ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್, ಬೆಂಗಳೂರು-11.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಶಾಖಾಧಿಕಾರಿ, ಸ್ಕೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಒಡಿಜಿಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

******

14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಕೆ.ಎಸ್.ಎಫ್.ಸಿ, ಭವನ, ನಂ:1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052 (ಮುಂದಿನ ಸೂಕ್ತ ಕ್ರಮಕ್ಕಾಗಿ)

ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ (2ಎ)
ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2023-24ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-163 ರಲ್ಲಿ ಘೋಷಿಸಿರುವಂತೆ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ರೂ.10.00 ಕೋಟಿಗಳವರೆಗಿನ ಸಾಲಕ್ಕೆ ಶೇ.6% ಬಡ್ಡಿ ದರದಲ್ಲಿ ಸಹಾಯಧನವನ್ನು ನೀಡುವ ಕುರಿತು.

ಓದಲಾಗಿದೆ:-
1. 2023-24ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-163.
2. ಆಯುಕ್ತರ ಪ್ರಸ್ತಾವನೆ ಸಂಖ್ಯೆ: BCWD-16012/20/2023-BCWD_TRAINING-BCWD, ದಿನಾಂಕ:03.08.2023

21.10.2023

ಕ.ರಾ.ಹ.ಸಂ
ಪ್ರಧಾನ ಕಛೇರಿ
ಸಂಖ್ಯೆ: 610 ದಿ: 21/10/2023

### ಪ್ರಸ್ತಾವನೆ:

ಮೇಲೆ ಓದಲಾದ (1)ರ 2023-24 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-163 ರಲ್ಲಿ "ರಾಜ್ಯದ ಸೇವಾ ವಲಯದಲ್ಲಿ ಇರುವ ವಿಪುಲ ಅವಕಾಶಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಪಡೆಯುವ ರೂ.10.00 ಕೋಟಿಗಳವರೆಗಿನ ಸಾಲಕ್ಕೆ ಶೇ.6ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುವುದು" ಎಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಆಯುಕ್ತರ ಪ್ರಸ್ತಾವನೆಯಲ್ಲಿ 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ ಸಂಖ್ಯೆ:163ರಲ್ಲಿ ಘೋಷಿಸಿರುವಂತೆ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ)ಗೆ ಸೇರಿದ ಜನಾಂಗದವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತೀ ಹಿಂದುಳಿದಿರುತ್ತಾರೆ. ಸದರಿ ಜನಾಂಗದವರನ್ನು ಆರ್ಥಿಕವಾಗಿ ಸಧೃಡಗೊಳಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರುವುದು ಇಲಾಖೆಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಪ್ರವರ್ಗಗಳಲ್ಲಿನ ಅರ್ಹ ಉದ್ದಿಮೆದಾರರಿಗೆ ಉದ್ಯಮ ಕ್ಷೇತ್ರದಲ್ಲಿ ಉತ್ತೇಜಿಸುವ ಸಲುವಾಗಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ/ಸೇವಾ ಘಟಕಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (KSFC) ಮೂಲಕ ಬಡ್ಡಿ ಸಹಾಯಧನ ನೀಡುವುದು ಅವಶ್ಯಕತೆ ಇರುತ್ತದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (KSFC) ಮೂಲಕ ರೂ.10.00 ಕೋಟಿಗಳವರೆಗೆ ಪಡೆಯುವ ಸಾಲಕ್ಕೆ ಶೇ.6% ರ ಬಡ್ಡಿ ದರದಲ್ಲಿ ಸಹಾಯಧನವನ್ನು ಮಂಜೂರು ಮಾಡಲು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 396 ಬಿಎಂಎಸ್ 2023
### ಬೆಂಗಳೂರು, ದಿನಾಂಕ: 10-10-2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-163ರಲ್ಲಿ ಘೋಷಿಸಿರುವಂತೆ ರಾಜ್ಯದ ಸೇವಾ ವಲಯದಲ್ಲಿ ಇರುವ ವಿಪುಲ ಅವಕಾಶಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ಯಮಿಗಳು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಪ್ರಥಮ ಬಾರಿಗೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ (KSFC) ಮೂಲಕ ಪಡೆಯುವ ರೂ.10.00ಕೋಟಿಗಳವರೆಗಿನ ಸಾಲಕ್ಕೆ ಶೇ.6%ರ ಬಡ್ಡಿ ದರದಲ್ಲಿ ಸಹಾಯಧನವನ್ನು ನೀಡಲು ಹಾಗೂ ಈ ಯೋಜನೆಗೆ ತಗಲುವ ವೆಚ್ಚವನ್ನು ತರಬೇತಿ, ಅರಿವು ಮತ್ತು ಪ್ರೋತ್ಸಾಹ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ಲೆಕ್ಕಶೀರ್ಷಿಕೆ:2225-03-277-2-37 ಆಬ್ಜೆಕ್ಟೀವ್ ಕೋಡ್-059 ರಡಿಯಲ್ಲಿ ಭರಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

ಯೋಜನೆಯ ನಿಯಮಗಳು ಮತ್ತು ಷರತ್ತುಗಳು:

1. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ನಿಯಮಗಳಿಗೆ ಒಳಪಟ್ಟ, ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಗಳಿಗೆ ಸೇರಿದ ಉದ್ದಿಮೆದಾರರು ಉತ್ಪಾದನೆ/ ಉದ್ಯಮ/ ಸೇವಾ ಚಟುವಟಿಕೆಗಳ ಘಟಕಗಳನ್ನು ಪ್ರಾರಂಭಿಸಲು ಈ ಯೋಜನೆಯಲ್ಲಿ ಸಹಾಯಧನವನ್ನು ಪಡೆಯಲು ಅರ್ಹರಿರುತ್ತಾರೆ.

a. ಹೊಸ ಘಟಕವನ್ನು ಸ್ಥಾಪಿಸುವವರು ಪ್ರಾರಂಭಿಕ ಉದ್ದಿಮೆದಾರರಾಗಿರಬೇಕು.
b. ಅಸ್ತಿತ್ವದಲ್ಲಿರುವ ಘಟಕಗಳ ವಿಸ್ತರಣೆ, ಆಧುನೀಕರಣ ಮತ್ತು ವೈವಿಧ್ಯೀಕರಣವನ್ನು ಮಾಡುವ ಉದ್ಯಮದಾರರು ಈ ಹಿಂದೆ ರಾಷ್ಟ್ರೀಕೃತ ಬ್ಯಾಂಕ್‌ಗಳು/ಅಪೆಕ್ಸ್ ಬ್ಯಾಂಕ್/ ಡಿಸಿಸಿ ಬ್ಯಾಂಕ್/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗಳ ವತಿಯಿಂದ ಸಾಲ ಹಾಗೂ ಸಬ್ಸಿಡಿಯನ್ನು ಪಡೆದಿರಬಾರದು.
c. ಉದ್ದಿಮೆದಾರರು ಒಮ್ಮೆ ಮಾತ್ರ ಈ ಪ್ರಯೋಜನವನ್ನು ಪಡೆಯಲು ಅರ್ಹರಾಗಿರುತ್ತಾರೆ.

2. ಘಟಕವು ಸಂಪೂರ್ಣವಾಗಿ ಪ್ರವರ್ಗ-1 ಮತ್ತು ಪ್ರವರ್ಗ-2(ಎ)ಗೆ ಸಂಬಂಧಿಸಿದ ಉದ್ದಿಮೆದಾರರು ಮಾಲೀಕತ್ವವನ್ನು ಹೊಂದಿರಬೇಕು. ಪ್ರವರ್ಗ-1 ಮತ್ತು ಪ್ರವರ್ಗ-2(ಎ) ಜಾತಿಯವರನ್ನು ಹೊರತುಪಡಿಸಿ ಭಾಗಶಃ ಘಟಕಗಳ ಮಾಲೀಕತ್ವ/ಷೇರು ಹಿಡುವಳಿ ಬಡ್ಡಿ ಸಹಾಯಧನಕ್ಕೆ ಅರ್ಹವಾಗಿರುವುದಿಲ್ಲ.
3. ಅರ್ಜಿದಾರರು ಪ್ರವರ್ಗ-1 ಮತ್ತು ಪ್ರವರ್ಗ-2(ಎ)ಗೆ ಸೇರಿರಬೇಕು ಮತ್ತು ಕರ್ನಾಟಕದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಜಾತಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು. ಮೂಲ ಜಾತಿ ಪ್ರಮಾಣ ಪತ್ರದ ವೈಯಕ್ತಿಕ ಪರಿಶೀಲನೆ ಮಾಡುವುದು. ಸಂದೇಹವಿದ್ದಲ್ಲಿ, ಸಾಲವನ್ನು ಬಿಡುಗಡೆ ಮಾಡುವ ಮೊದಲು ಜಾತಿ ಪ್ರಮಾಣ ಪತ್ರದ ಅಸಲಿತನವನ್ನು ಸಕ್ಷಮ ಪ್ರಾಧಿಕಾರದಿಂದ ಪರಿಶೀಲಿಸತಕ್ಕದ್ದು. ಸಾಲ ಪಡೆದವರ ವಿರುದ್ಧ ಜಾತಿ ಪ್ರಮಾಣ ಪತ್ರದ ಬಗ್ಗೆ ಯಾವುದೇ ದೂರು ಇದ್ದಲ್ಲಿ, ಮುಂದಿನ ಕ್ರಮಕ್ಕಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಕಳುಹಿಸಬೇಕು. (ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳನ್ನು ತಪ್ಪಿಸಲು ಇವು ಅಗತ್ಯ). ಜಾತಿ ಪ್ರಮಾಣ ಪತ್ರವು ಸುಳ್ಳು ಎಂದು ಕಂಡುಬಂದಲ್ಲಿ, ಅರ್ಜಿದಾರರು ಕಾನೂನು ಕ್ರಮಕ್ಕೆ ಅರ್ಹರಾಗಲಿದ್ದಾರೆ ಮತ್ತು ಪಡೆದ ಸಂಪೂರ್ಣ ಬಡ್ಡಿ ಸಬ್ಸಿಡಿಯನ್ನು ಮರು ಪಾವತಿಸಲು ಸಹ ಜವಾಬ್ದಾರರಾಗಿರುತ್ತಾರೆ.
4. ಬಡ್ಡಿ ಸಬ್ಸಿಡಿ ಸಾಲದ ಮೊತ್ತ ಗರಿಷ್ಠ ಸಾಲದ ಮಿತಿ ರೂ.10.00 ಕೋಟಿಗಳವರೆಗೆ ಮಾತ್ರ ಇರುತ್ತದೆ.
5. ಗರಿಷ್ಠ ಸಾಲದ ಮಿತಿ ರೂ.10.00 ಕೋಟಿಗಳು ಟರ್ಮ್ ಲೋನ್ ಮತ್ತು ಯೋಜನಾ ಪ್ರಸ್ತಾವನೆಯನ್ನು ಆಧರಿಸಿ ಒಂದು ಬಾರಿ ದುಡಿಯುವ ಬಂಡವಾಳವನ್ನು ಒಳಗೊಂಡಿರುತ್ತದೆ. ಆದರೆ, ಕಾರ್ಯನಿರತ ಬಂಡವಾಳವು ಗರಿಷ್ಠ ರೂ.50.00 ಲಕ್ಷಗಳಿಗೆ ಸೀಮಿತವಾಗಿದೆ. ದುಡಿಯುವ ಬಂಡವಾಳ ಮಂಜೂರಾತಿ ಪುನರಾವರ್ತನೆಯನ್ನು ಅನುಮತಿಸಲಾಗುವುದಿಲ್ಲ.
6. ಕನಿಷ್ಠ ಸಾಲದ ಮೊತ್ತ ಈ ಯೋಜನೆಯಡಿ ರೂ.5.00 ಲಕ್ಷಗಳಾಗಿದೆ. (ಇತರ ಯೋಜನೆಗಳು ಇರುವುದರಿಂದ ಇದನ್ನು ಸೂಚಿಸಲಾಗಿದೆ ಸಬ್ಸಿಡಿಯನ್ನು ಘಟಕ ವೆಚ್ಚದ ಮೇಲೆ ಮತ್ತು ಸುಲಭವಾದ ಮೇಲ್ವಿಚಾರಣೆಯ ಹಂತದಿಂದ ನೀಡಲಾಗುತ್ತದೆ).

7. ಫಲಾನುಭವಿ/ಅರ್ಜಿದಾರರು ಸಾಲದ ಮೊತ್ತದ ಮೇಲೆ ಒಟ್ಟು ಚಾರ್ಜ್ ಮಾಡಬಹುದಾದ ಬಡ್ಡಿಯಲ್ಲಿ ಶೇಕಡಾ 6%ರಷ್ಟು ಬಡ್ಡಿ ಮೊತ್ತವನ್ನು ಮಾತ್ರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ (KSFC) ಭರಿಸಲಾಗುವುದು. ಉಳಿದ ಬಡ್ಡಿ ಮೊತ್ತವನ್ನು ಫಲಾನುಭವಿ/ ಅರ್ಜಿದಾರರು ಭರಿಸಬೇಕು.
8. ಮರುಪಾವತಿ ಅವಧಿಯು ರೂ.5.00 ಕೋಟಿಗಳವರೆಗೆ ಇದ್ದಲ್ಲಿ 8 ವರ್ಷಗಳು, ರೂ.5.00 ಕೋಟಿಯಿಂದ ರೂ.10.00 ಕೋಟಿಗಳವರೆಗಿನ ಮೊತ್ತಕ್ಕೆ ಗರಿಷ್ಠ 10 ವರ್ಷಗಳ ಮರುಪಾವತಿಯ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ.
9. ಯೋಜನಾ ವೆಚ್ಚ/ಸಾಲದ ಯಾವುದೇ ಮೊತ್ತವನ್ನು ನೀಡಲು ನಿಗದಿಪಡಿಸಿದ ಮೊತ್ತಗಿಂತ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ.
10. ಉದ್ದಿಮೆದಾರರು ಸಾಲದ ಮೊದಲ ಕಂತು ಬಿಡುಗಡೆಯಾದ ದಿನಾಂಕದಿಂದಲೇ ಬಡ್ಡಿ ಸಬ್ಸಿಡಿಗೆ ಅರ್ಹವಾಗಲಿದ್ದಾರೆ.
11. ಉದ್ದಿಮೆದಾರರಿಗೆ ಮಂಜೂರು ಮಾಡಿರುವ ಸಾಲದ ಬಾಬ್ತು ಮತ್ತು ಬಡ್ಡಿ ಬಾಬ್ತನ್ನು ವಸೂಲಿ ಮಾಡುವುದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ. ಉದ್ದಿಮೆದಾರರು ಸಾಲದ ಕಂತಿನ ಬಾಬ್ತು ಹಾಗೂ ಅವರು ಪಾವತಿಸಬೇಕಾದ ಬಡ್ಡಿಯನ್ನು ಪಾವತಿಸಿದಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಶೇಕಡಾ 6%ರಷ್ಟು ಬಡ್ಡಿ ಮೊತ್ತವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಭರಿಸಲಾಗುವುದು.
12. ಉದ್ದಿಮೆದಾರರು ಕಂತು ಮತ್ತು ಬಡ್ಡಿಯನ್ನು ಪಾವತಿಸುವಲ್ಲಿ ವಿಫಲವಾದ ಸಂದರ್ಭದಲ್ಲಿ ಸರ್ಕಾರವು ಆ ಅವಧಿಗೆ ಬಡ್ಡಿ ಸಬ್ಸಿಡಿಯನ್ನು ಪಾವತಿಸುವುದಿಲ್ಲ. ಆದರೆ ಒಮ್ಮೆ ಕಂತುಗಳನ್ನು ಕ್ರಮಬದ್ಧಗೊಳಿಸಿದರೆ ಮತ್ತೊಮ್ಮೆ ಬಡ್ಡಿ ಸಬ್ಸಿಡಿಗೆ ಅರ್ಹವಾಗಿರುತ್ತಾರೆ.
13. ಭಾರತ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರದ ಯಾವುದೇ ಇತರ ಯೋಜನೆಯ ಅಡಿಯಲ್ಲಿ ಬಡ್ಡಿ ಸಬ್ಸಿಡಿಯನ್ನು ಪಡೆದ ಘಟಕಗಳು/ಉದ್ದಿಮೆದಾರರು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
14. ಯೋಜನೆಯ ಸುಗಮ ಕಾರ್ಯನಿರ್ವಹಣೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರನ್ನೊಳಗೊಂಡ ಸಮಿತಿಯಲ್ಲಿ ಮೇಲ್ವಿಚಾರಣೆ ಮಾಡಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 656 ವೆಚ್ಚ-3/2023 ದಿನಾಂಕ:-21.09.2023ರಲ್ಲಿ ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್ 78 ಐಎಂಎಂ 2023, ದಿನಾಂಕ:07.10.2023 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ
V. Akkamahadevi
(ವಿ. ಅಕ್ಕಮಹಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ,

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಆಯುಕ್ತರು, ಸೂಕ್ಷ್ಮ, ಸಣ್ಣ ಮಧ್ಯಮ ಕೈಗಾರಿಕಾ ನಿರ್ದೇಶನಾಲಯ, ಖನಿಜ ಭವನ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC), ತಿಮ್ಮಯ್ಯ ರೋಡ್, ಬೆಂಗಳೂರು.560052
7. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

<u>ಪ್ರತಿ ಮಾಹಿತಿಗಾಗಿ:-</u>

1. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ , ವಿಕಾಸ ಸೌಧ ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

------

ಅಲ್ಪಸಂಖ್ಯಾತರ ಉದ್ಯಮಿದಾರರಿಗೆ ಬಡ್ಡಿ

ಸಹಾಯಧನ ಯೋಜನೆ

ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ:MWD 49 MDC 2023, ದಿನಾಂಕ 11.10.2023 ಕ್ಕೆ**

**ಮಾರ್ಗಸೂಚಿ**

ರಾಜ್ಯದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ಯಮೆದಾರರಿಂದ ಹೊಸದಾಗಿ ಸ್ಥಾಪಿಸಲ್ಪಡುವ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯಮಗಳಿಗೆ ಬಡ್ಡಿ ಸಹಾಯಧನ ಯೋಜನೆ (2023).

****

ರಾಜ್ಯದ ಅಲ್ಪಸಂಖ್ಯಾತರ ವರ್ಗಗಳ ಉದ್ಯಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಸಮಂಜಸವಾದ ಬಡ್ಡಿ ದರದಲ್ಲಿ ಬಂಡವಾಳ ಹೂಡಿಕೆಗಳಿಗೆ ಸಾಂಸ್ಥಿಕ ಸಾಲವನ್ನು ಪಡೆಯುವಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಅಲ್ಪಸಂಖ್ಯಾತರ ವರ್ಗಗಳ ಉದ್ಯಮೆದಾರರಿಗೆ ಪ್ರತ್ಯೇಕ ವಾರ್ಷಿಕ ಶೇ.6.00 ರಷ್ಟು ಬಡ್ಡಿ ಸಹಾಯಧನ (Interest Subvention / Subsidy) ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC) ಮೂಲಕ ಜಾರಿಗೊಳಿಸಿದೆ.

**01. ಅಲ್ಪಸಂಖ್ಯಾತರ ವರ್ಗಗಳ ಉದ್ಯಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಬಡ್ಡಿ ಸಹಾಯಧನ (Interest Subvention / Subsidy) ಯೋಜನೆ (2023) ರ ಪ್ರಮುಖ ಅಂಶಗಳು.**

ಎ) ಈ ಯೋಜನೆಯನ್ನು ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ವಿಸ್ತರಿಸುವುದು.

ಬಿ) ಉದ್ಯಮಗಳ ವ್ಯಾಖ್ಯಾನ – ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ .2006ರ ನಿಬಂಧನೆಯಲ್ಲಿ ದಿನಾಂಕ: 1ನೇ ಜೂನ್ 2020ರ ಎಸ್ ಓ. 1702(ಇ) ಅಧಿಸೂಚನೆ ಪ್ರಕಾರ ಚಾಲ್ತಿಯಲ್ಲಿರುವ ಹಾಗೂ ಕಾಲಕಾಲಕ್ಕೆ ಮಾಡಲಾದ ಮಾರ್ಪಾಡುಗಳ ಸೇವಾ ವಲಯದ ವ್ಯಾಖ್ಯಾನ.

ಸಿ) ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಉದ್ಯಮಗಳ ವಿಸ್ತರಣೆ ವೈವಿಧ್ಯೀಕರಣ, ಆಧುನೀಕರಣ, ತಂತ್ರಜ್ಞಾನದ ಉನ್ನತೀಕರಣ ಇತ್ಯಾದಿಗಳಿಗೆ ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳ ಒಟ್ಟು ಬ್ಲಾಕ್ನ ಎಲ್ಲಾ ಹೊಸ ಹೂಡಿಕೆಗಳಿಗೆ ಈ ಯೋಜನೆಯನ್ನು ವಿಸ್ತರಿಸುವುದು.

ಡಿ) ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ. ಯಿಂದ ಮಂಜೂರಾದ ಭೂಮಿಯಲ್ಲಿ ಮಾಡಿದ ಹೂಡಿಕೆ, ಸ್ವಂತ/ ಗುತ್ತಿಗೆ ಪಡೆದ ಭೂಮಿಯನ್ನು ಖರೀದಿಸಲು ಮಾಡಿದ ಹೂಡಿಕೆಗಳು ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ಹಣಕಾಸು ಪಡೆಯಲು ಅರ್ಹವಿರುವುದಿಲ್ಲ. ಆದಾಗ್ಯೂ ಭೂಮಿಯ ಮೇಲಿನ ಹೂಡಿಕೆಗೆ ಸಾಲಪಡೆಯಲು ಇಚ್ಛಿಸಿದಲ್ಲಿ ಕೆ.ಎಸ್. ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಸಾಲ ಯೋಜನೆಯಡಿಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿದರದಲ್ಲಿ ಸಾಲ ಪಡೆಯಲು ಅರ್ಹರಿರುತ್ತಾರೆ.

ಇ) ಕೆ.ಎಸ್‌ಎಫ್.ಸಿ. ಸಾಲದ ಮೊದಲ ಕಂತಿನ ವಿತರಣೆಯ ದಿನಾಂಕದಿಂದ ಗರಿಷ್ಠ 8 ವರ್ಷಗಳವರೆಗೆ ಬಡ್ಡಿ ಸಹಾಯಧನ ಲಭ್ಯವಿರುತ್ತದೆ

**02. ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಂದ ಸ್ಥಾಪಿಸಲ್ಪಡುವ ಹೊಸ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಬಡ್ಡಿ ಸಹಾಯಧನ (Interest Subvention / Subsidy) ಯೋಜನೆ (2023) ಅಡಿಯಲ್ಲಿ ಸಾಲ ಪಡೆಯಲು ಅರ್ಹತೆ ಹಾಗೂ ಮಾರ್ಗಸೂಚಿಗಳು.**

ಎ) ಅಲ್ಪಸಂಖ್ಯಾತರ ವರ್ಗಗಳ ಉದ್ಯಮಿಗಳಿಂದ' ಸ್ಥಾಪಿಸಲ್ಪಟ್ಟ ಉದ್ಯಮಗಳು' ಅಂದರೆ, ಸ್ವಂತ ಮಾಲೀಕತ್ವ, ಪಾಲುದಾರಿಕೆ ಸಂಸ್ಥೆಗಳು, ಕಂಪನಿಗಳು ಹಾಗೂ ಇತರೆ ಕಾನೂನು ಅಸ್ತಿತ್ವದ ಉದ್ಯಮಿಗಳು. ಪ್ರವರ್ತಕರ ಬಂಡವಾಳ ಹೂಡಿಕೆಯು ಶೇ.100 ರಷ್ಟು ಅಲ್ಪಸಂಖ್ಯಾತರ ವರ್ಗಗಳಲ್ಲಿ ಇರಬೇಕು.

ಬಿ) ಈ ಉದ್ಯಮಿಗಳು ಈಗಾಗಲೇ ಲಭ್ಯವಿರುವ ಬೇರೆ ಯೋಜನೆಯಡಿ ಬಡ್ಡಿ ಸಹಾಯಧನ ಸಾಲದ ನೆರವು ಪಡೆದಿದ್ದರೆ ಈ ಯೋಜನೆಯಡಿ ಸಾಲದ ನೆರವು ಲಭ್ಯವಿರುವುದಿಲ್ಲ.

ಸಿ) ಕೆ.ಎಸ್.ಎಫ್.ಸಿ. ಕಾಲಕಾಲಕ್ಕೆ ಗುರುತಿಸಿದ / ನವೀಕರಿಸಿದ ಕೈಗಾರಿಕಾ ಚಟುವಟಿಕೆಗಳಿಗೆ ಮಾತ್ರ ಈ ಯೋಜನೆಯಡಿಯಲ್ಲಿ ಸಾಲದ ನೆರವು ಪಡೆಯಲು ಅರ್ಹವಿರುತ್ತದೆ.

ಸಾಲದ ಪ್ರಮಾಣ :

ಎ) ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಘಟಕಗಳು: ಕೈಗಾರಿಕಾ ಕ್ಷೇತ್ರದಲ್ಲಿ ನೇರವಾಗಿ ತೊಡಗಿಸಿಕೊಂಡಿರುವ ಕಾನೂನು ಅಸ್ತಿತ್ವದ ಪ್ರತ್ಯೇಕ ಉದ್ಯಮಗಳಿಗೆ ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಕ್ಕೆ ಗರಿಷ್ಠ ಸಾಲದ ಗರಿಷ್ಠ ಮಿತಿ 10.00 ಕೋಟಿ ರೂ.ಗಳು.

ಬಿ) ಉದ್ಯಮಿಗಳು ಈ ಯೋಜನೆಯಡಿಯಲ್ಲಿ ಅನೇಕ ಬಾರಿ ಸಾಲಗಳನ್ನು ಪಡೆಯಬಹುದು. ಆದರೆ, ಪ್ರತಿ ಘಟಕಕ್ಕೆ ಒಟ್ಟಾರೆ ಸಾಲದ ಗರಿಷ್ಠ ಮಿತಿ ರೂ.10.00 ಕೋಟಿ ಮಾತ್ರ ಲಭ್ಯವಿರುತ್ತದೆ.

ಸಿ) ಸಾಲದ ಮಿತಿ 10.00 ಕೋಟಿ ರೂ.ಗಳು ಮೀರಿದರೆ, ಹೆಚ್ಚುವರಿ ಭಾಗದ ಸಾಲಕ್ಕೆ ಕೆ.ಎಸ್.ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿ ದರವು ಅನ್ವಯಿಸುತ್ತದೆ.

ಡಿ) ಸಾಲದ ಕನಿಷ್ಠ ಮಿತಿ 5.00 ಲಕ್ಷ ರೂ.ಗಳಾಗಿರುತ್ತದೆ.

03. ಅನ್ವಯವಾಗುವ ಬಡ್ಡಿ ದರ:

ಎ) ಕೆ.ಎಸ್.ಎಫ್.ಸಿ.ಯು ಚಾಲ್ತಿಯಲ್ಲಿರುವ ಬಡ್ಡಿ ದರದಲ್ಲಿ ಸಾಲವನ್ನು ಮೌಲ್ಯಮಾಪನ ಮಾಡಿ ಸಾಲ ಮಂಜೂರು ಮಾಡುತ್ತದೆ. ಉದ್ದಿಮೆದಾರರು ಅದಕ್ಕೆ ಅನುಗುಣವಾಗಿ ಬಡ್ಡಿಯನ್ನು ಪಾವತಿಸಬೇಕು.

ಬಿ) ಈ ಯೋಜನೆಯಡಿ ಸ್ಥಾಪಿಸಲ್ಪಡುವ ಸೂಕ್ಷ್ಮ ಹಾಗೂ ಸಣ್ಣ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ (2023) ಯಡಿಯಲ್ಲಿ ಮಂಜೂರಾದ ಸಾಲಗಳಿಗೆ ನಿಗಧಿತ ಸಮಯದಲ್ಲಿ ಮರುಪಾವತಿಗೆ ವಾರ್ಷಿಕ ಶೇ.0.50 ರಿಯಾಯಿತಿಯನ್ನು ವಿಸ್ತರಿಸಲಾಗುವುದು.

ಸಿ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಪ್ರಸ್ತುತ ಬಡ್ಡಿ ದರವು ವಾರ್ಷಿಕ ಶೇ.12.00 ನಿಗಧಿತ ಸಮಯದಲ್ಲಿ ಮರುಪಾವತಿಗೆ ಶೇ.0.50 ರಿಯಾಯಿತಿಗಳನ್ನು ವಿಸ್ತರಿಸಿದಲ್ಲಿ ಪ್ರಸ್ತುತ ಬಡ್ಡಿ ದರದಲ್ಲಿ ವಾರ್ಷಿಕ ಶೇ.6.00 ರಷ್ಟು ಬಡ್ಡಿ ಸಹಾಯಧನವು (Interest Subvention / Subsidy) (Upfront) ಭಾಗವಾಗಿದ್ದು, ಅಲ್ಪಸಂಖ್ಯಾತರ ವರ್ಗಗಳ ಉದ್ದಿಮೆದಾರರಿಗೆ ವಾರ್ಷಿಕ ನಿವ್ವಳ ಶೇ.5.50 ರಷ್ಟು ಬಡ್ಡಿದರ ಅನ್ವಯವಾಗುತ್ತದೆ.

ಡಿ) ಕೆ.ಎಸ್.ಎಫ್.ಸಿ.ಯು ಚಾಲ್ತಿ ಬಡ್ಡಿ ದರವನ್ನು ಹೆಚ್ಚಿಸಿದಾಗ ಈ ಯೋಜನೆಯಡಿ ಬಡ್ಡಿ ಸಹಾಯಧನವು ಶೇ.6.00 ರಷ್ಟು ಸ್ಥಿರವಾಗಿದ್ದು, ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ದಿಮೆದಾರರು ಹೆಚ್ಚಾದ ಬಡ್ಡಿ ದರವನ್ನು ಭರಿಸಬೇಕಾಗುತ್ತದೆ.

ಇ) ಬಡ್ಡಿ ಸಹಾಯಧನವನ್ನು ಪಡೆಯಲು ಉದ್ದಿಮೆದಾರರು ಕೆ.ಎಸ್.ಎಫ್.ಸಿ. ಸಂಸ್ಥೆಯಿಂದ ಪಡೆದ ಸಾಲಗಳನ್ನು ಚಾಚೂ ತಪ್ಪದೆ ಪ್ರತಿ ತಿಂಗಳು ನಿಗಧಿತ ಸಮಯಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ. ಒಂದು ವೇಳೆ ನಿಗಧಿತ ಸಮಯದಲ್ಲಿ ಮರುಪಾವತಿ ಮಾಡದ ಕಂತುಗಳಿಗೆ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.

ಎಫ್) ಉದ್ದಿಮೆದಾರರು ಸಾಲಗಳ ಮೊದಲ ಕಂತು ವಿತರಣೆಯ ದಿನಾಂಕದಿಂದ ಗರಿಷ್ಠ 8 ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಯೋಜನೆಯ ಕಾರ್ಯಸಾಧ್ಯತೆಯನ್ನು ಪರಿಗಣಿಸಿ ಮರುಪಾವತಿ ಅವಧಿಯು 8 ವರ್ಷಗಳನ್ನು ಮೀರಿದರೂ ಆಯಾ ಸಾಲ / ಸಾಲಗಳ ಮೊದಲ ವಿತರಣೆಯ ದಿನಾಂಕದಿಂದ ಗರಿಷ್ಠ 8 ವರ್ಷಗಳವರೆಗೆ ಬಡ್ಡಿ ಸಹಾಯಧನ ಲಭ್ಯವಿದ್ದು, ಗರಿಷ್ಠ ಅವಧಿ ಅಂದರೆ 8 ವರ್ಷಗಳ ನಂತರ ಮರುಪಾವತಿಸಿದ ಸಾಲ / ಸಾಲಗಳ ಬಾಕಿಗೆ ಕೆ.ಎಸ್.ಎಫ್.ಸಿ.ಯಲ್ಲಿ ಚಾಲ್ತಿಯಲ್ಲಿರುವ ಬಡ್ಡಿ ದರವು ಅನ್ವಯವಾಗುತ್ತದೆ.

ಜಿ) ಯೋಜನೆಯಡಿ ಮೇಲೆ ತಿಳಿಸಲಾದ ಉದ್ಯಮಗಳಿಗೆ ಮಂಜೂರಾದ ಅವಧಿ ಸಾಲಗಳಿಗೆ ಮಾತ್ರ ಬಡ್ಡಿ ಸಹಾಯಧನ (Interest Subvention / Subsidy) (Upfront) ಲಭ್ಯವಿರುತ್ತದೆ. ದುಡಿಮೆ ಬಂಡವಾಳಕ್ಕೆ ನೀಡಿದ ಅವಧಿ ಸಾಲ, ಪ್ರತಿಷ್ಠಿತ ಉದ್ದಿಮೆದಾರರ ಸಾಲ, ಸಾಂಸ್ಥಿಕ ಸಾಲ ಇತ್ಯಾದಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

<u>04. ಬಡ್ಡಿ ಸಹಾಯಧನ (Interest Subvention / Subsidy) ಯೋಜನೆ (2023) ಯಡಿಯಲ್ಲಿ ಸಾಲ ಪಡೆಯಲು ಅನರ್ಹವಾದ ಉದ್ಯಮಗಳು/ ಚಟುವಟಿಕೆಗಳು.</u>

ಎ) ಎನ್.ಬಿ.ಎಫ್.ಸಿ/ ಎನ್.ಎಸ್.ಐ.ಸಿ/ ಇತರೆ ಬ್ಯಾಂಕ್‌ಗಳು/ ಖಾಸಗಿ ಹಣಕಾಸುದಾರರು, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳು / ಮರು ಹಣಕಾಸುಗಳು (Re Finance) ಅಥವಾ ಕೆ.ಎಸ್.ಎಫ್.ಸಿ.ಯಿಂದ ಪಡೆದ ಹಿಂದಿನ ಸಾಲ/ಸಾಲಗಳ ಪರಿವರ್ತನೆಗಾಗಿ ಪಡೆದ ಸಾಲಗಳು.

ಬಿ) ಈ ಕೆಳಗಿನ ಚಟುವಟಿಕೆಗಳಲ್ಲಿ ತೊಡಗಿರುವ ಉದ್ಯಮಗಳು :

ಅ) ಎಲ್ಲಾ ಮೂಲ ಸೌಕರ್ಯ ಯೋಜನೆಗಳು, ವಾಣಿಜ್ಯ ರಿಯಲ್ ಎಸ್ಟೇಟ್(CRE) ಶಿಕ್ಷಣ ಸಂಸ್ಥೆಗಳು ಇತ್ಯಾದಿ.

ಆ) ವಾಣಿಜ್ಯ / ವ್ಯಾಪಾರ ಚಟುವಟಿಕೆಗಳು, ವ್ಯಾಪರ ಮಳಿಗೆಗಳು ಮತ್ತು ಮಾಲ್.

ಇ) ವಾಸಕ್ಕೆ ನಿರ್ಮಿಸುವ ವಸತಿ ಬಡಾವಣೆಗಳು ಹಾಗೂ ಬಹುಮಹಡಿ ವಸತಿ ಕಟ್ಟಡಗಳು, ಸಿನಿಮಾ ಮಂದಿರಗಳು, ಕಲ್ಯಾಣ ಮಂಟಪಗಳು, ಸಾರಿಗೆ ವಾಹನಗಳ ನಿರ್ಮಾಣ ಉಪಕರಣಗಳು ಇತ್ಯಾದಿ.

ಈ) ಕೆ.ಎಸ್.ಎಫ್.ಸಿ.ಯ ಪ್ರಕಾರ ಅರ್ಹ ವಲಯದ ಚಟುವಟಿಕೆಗಳನ್ನು ಹೊರತುಪಡಿಸಿ ಅಥವಾ ಇಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸದ ಬೇರೆ ಯಾವುದೇ ಚಟುವಟಿಕೆಗಳು.

05. ಇತರೆ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು :

ಎ) ಈ ಯೋಜನೆಯಡಿ ಈಗಾಗಲೇ ಇರುವ ಕಟ್ಟಡಗಳ ನವೀಕರಣ / ರಿಪೇರಿ ಕೆಲಸಗಳಿಗೆ ತಗಲುವ ಬಂಡವಾಳ ಹೂಡಿಕೆಯ ಸಾಲಗಳಿಗೆ ಈ ಬಡ್ಡಿ ಸಹಾಯಧನವು ಲಭ್ಯವಿರುವುದಿಲ್ಲ.

ಬಿ) ಕೆ.ಎಸ್.ಎಫ್.ಸಿ.ಯಲ್ಲಿ ಸಾಲದ ಅನುಮೋದನೆಯ ನಿಯಮಗಳು ಮತ್ತು ಷರತ್ತುಗಳಾದ ಪ್ರವರ್ತಕರ ಪಾಲಿನ ಬಂಡವಾಳ, ಸಾಲ ಈಕ್ವಿಟಿ ಅನುಪಾತ, ಪೂರಕ ಭದ್ರತಾ ಅವಶ್ಯಕತೆ, ಯೋಜನೆಯ ಕಾರ್ಯಸಾಧ್ಯತೆ, ಗರಿಷ್ಟ ಸಾಲದ ಮಿತಿ, ಇತ್ಯಾದಿಗಳು ಚಾಲ್ತಿಯಲ್ಲಿರುವ ಸಂಸ್ಥೆಯ ಸಾಲದ ನೀತಿಯ ಪ್ರಕಾರ ಅನ್ವಯವಾಗುತ್ತವೆ ಹಾಗೂ ಈ ಮಾರ್ಗಸೂಚಿಗಳಿಗೆ ಯಾವುದೇ ರೀತಿಯ ರಿಯಾಯಿತಿಯನ್ನು ನೀಡಲಾಗುವುದಿಲ್ಲ.

ಸಿ) ಈ ಯೋಜನೆಯಡಿ ಸಾಲ ಪಡೆಯುವ ಉದ್ಯಮಿಗಳು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಸೀಲ್ದಾರ್ ರಿಂದ ನಿಗಧಿತ ನಮೂನೆಯಲ್ಲಿ ಪಡೆದು ಸಾಲದ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಡಿ) ಸಾಲವನ್ನು ನಿಗದಿತ ಅವಧಿಯೊಳಗೆ ವಸೂಲಿ ಮಾಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯದಾಗಿರುತ್ತದೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯೇ ನಿಯಮಾನುಸಾರ Security/Guarantee ಪಡೆದು ಸಾಲ ಮಂಜೂರು ಮಾಡಲು ಕ್ರಮ ವಹಿಸತಕ್ಕದ್ದು. ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದ್ದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ/ಜವಾಬ್ದಾರರಲ್ಲ.

ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ನೀಡುವ ಬಡ್ಡಿ ಸಹಾಯಧನ ಯೋಜನೆ ಅಡಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮವು ಜಿಲ್ಲಾ ಮಟ್ಟದಲ್ಲಿ ಅಲ್ಪಸಂಖ್ಯಾತ ಉದ್ದಿಮೆದಾರರನ್ನು ಆಯ್ಕೆ ಮಾಡುವಾಗ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಶಾಖಾ ವ್ಯವಸ್ಥಾಪಕರ ಅಧ್ಯಕ್ಷತೆಯ ಸಮಿತಿಯಲ್ಲಿ ಆಯಾ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು, ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರು ಆಯ್ಕೆ ಸಮಿತಿಯ ಸದಸ್ಯರಾಗಿರತಕ್ಕದ್ದು, ಸಮಿತಿ ನಿಯಮಾನುಸಾರ ನಿಗದಿತ ಮಾನದಂಡಗಳನ್ನು ಪೂರೈಸಿದ ಹಾಗೂ Security/Guarantee ಯನ್ನು ಖಾತರಿ ಪಡಿಸಿಕೊಂಡು ಆಯ್ಕೆ ಮಾಡಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದಿಂದ ಮಂಜೂರಾತಿ ಪಡೆಯತಕ್ಕದ್ದು.

06. ಬಡ್ಡಿ ಸಹಾಯಧನ ಬಿಡುಗಡೆ :

ಬಡ್ಡಿ ಸಹಾಯಧನ (Interest Subvention / Subsidy) ವನ್ನು ಕೆ.ಎಸ್.ಎಫ್.ಸಿ. ಗೆ ಮುಂಚಿತವಾಗಿ ಬಿಡುಗಡೆ ಮಾಡಲಾಗುತ್ತದೆ.

ಎ) ಅಲ್ಪಸಂಖ್ಯಾತರ ವರ್ಗಗಳ ಇಲಾಖೆಯ ಹೆಡ್‌ನಡಿಯಲ್ಲಿ ಬಡ್ಡಿ ಸಹಾಯಧನವು ಪ್ರತ್ಯೇಕ (Head of account) ಹೊಂದಿರುತ್ತದೆ.

ಬಿ) ಕೆ.ಎಸ್.ಎಫ್.ಸಿ. ಚಾಲ್ತಿ ದರದ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಬಡ್ಡಿ ಸಹಾಯಧನ (Interest Subvention/ Subsidy) ಭಾಗವನ್ನು Demand Notice ನಲ್ಲಿ ಸೂಚಿಸತಕ್ಕದ್ದು. ನಿಗಧಿತ ದಿನಾಂಕದಂದು ಉದ್ದಿಮೆದಾರರು ನಿವ್ವಳ ಬಡ್ಡಿ (ಸಹಾಯಧನ ಬಿಟ್ಟು) ಮೊತ್ತವನ್ನು ಪಾವತಿಸಬೇಕು.

ಸಿ) ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ ಘಟಕಗಳಿಗೆ ಕೆ.ಎಸ್.ಎಫ್.ಸಿ. ಪ್ರತಿ ತಿಂಗಳು ಬಡ್ಡಿ ಸಹಾಯಧನದ ಅಂಶವನ್ನು ಅಲ್ಪಸಂಖ್ಯಾತ ವರ್ಗದ ಉದ್ಯಮಗಳ ಖಾತೆಗೆ ಜಮಾ ಮಾಡುವುದು.

ಡಿ) ಕೆ.ಎಸ್.ಎಫ್.ಸಿ. ಇವರು ಅಲ್ಪಸಂಖ್ಯಾತರ ವರ್ಗಗಳ ಫಲಾನುಭವಿಗಳಿಗೆ ಬಡ್ಡಿ ಸಹಾಯಧನ ಬಿಡುಗಡೆಯ ತ್ರೈಮಾಸಿಕ ಪಟ್ಟಿಯನ್ನು ವ್ಯವಸಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವರಿಗೆ ಸಲ್ಲಿಸತಕ್ಕದ್ದು.

## 07. ಸ್ಪಷ್ಟೀಕರಣಗಳು :

ಯೋಜನೆಯ ಬಗ್ಗೆ ಯಾವುದೇ ಸ್ಪಷ್ಟೀಕರಣವನ್ನು ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ಅಲ್ಪಸಂಖ್ಯಾತರ ವರ್ಗಗಳ ಇಲಾಖೆಯಿಂದ ಪಡೆಯಬಹುದು.

11/10/2023
(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್
ಇಲಾಖೆ.